ಅಧ್ಯಕ್ಷರು : ಈಗ ಧರಣಿ ಮುಗಿಯಿತು. ಆ ವಿಚಾರ ಬೇಡ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಎಲ್ಲ ಸದಸ್ಯರೂ ತಮ್ಮ ಸ್ಥಾನಗಳಿಗೆ ತೆರಳಿದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ: ರಾಜ್ಯದಲ್ಲಿ ಸರ್ಕಾರಿ ವೈದ್ಯರು ನಡೆಸುತ್ತಿರುವ ಮುಷ್ಕರದ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಸಿರಾ) : ಮಾನ್ಯ ಅಧ್ಯಕ್ಷರೆ, ರಾಜ್ಯಾದ್ಯಂತ ಸರ್ಕಾರಿ ವೈದ್ಯಾಧಿಕಾರಿಗಳು ಮತ್ತು ವೈದ್ಯಕೀಯೇತರ ಸಿಬ್ಬಂದಿ ವರ್ಗದವರು ಸತತವಾಗಿ 4 ದಿವಸಗಳಿಂದ ಮುಷ್ಕರವನ್ನು ಹಮ್ಮಿಕೊಂಡಿರುವುದರಿಂದ ಜನಸಾಮಾನ್ಯರು ಮತ್ತು ರೋಗಿಗಳು ಅತ್ಯಂತ ಸಂಕಷ್ಟಕ್ಕೊಳಗಾಗಿದ್ದಾರೆ. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಕೇಳಿದ್ದೆ. ಇವತ್ತಿನ ಎಲ್ಲ ಪತ್ರಿಕೆಗಳ ಮುಖಪುಟದಲ್ಲಿ ಮತ್ತು ಎಲ್ಲಾ ಟಿ.ವಿ. ಮಾಧ್ಯಮಗಳನ್ನೂ ಕೂಡ ರಾಜ್ಯಾದ್ಯಂತ ಮುಷ್ಕರದ ಹಿನ್ನೆಲೆಯಲ್ಲಿ ಆಗುತ್ತಿರುವ ತೊಂದರೆ ಏನು ಎನ್ನುವುದು ಎಲ್ಲರಿಗೂ ಮನವರಿಕೆಯಾಗಿದೆ. ದಾರಿ ದಾರಿಯಲ್ಲೇ ಹೆರಿಗೆಯಾಗಿರುವುದು, ಆಸ್ಪತ್ರೆಯ ಆವರಣದಲ್ಲಿಯೇ ಹೆರಿಗೆಯಾಗಿರುವುದು ಇದೆ. ಎಷ್ಟೋ ಕಡೆ ಜನರು ಹಣಕ್ಕೋಸ್ಕರ ಕಾಯ್ದು ಕುಳಿತುಕೊಂಡಿದ್ದಾರೆ. ಸತತವಾಗಿ ಇಷ್ಟರವರೆಗೆ 4 ದಿವಸ ಮುಸ್ಕರ ನಡೆದ ನಿದೆರ್ಶನವಿಲ್ಲ. ಇದನ್ನು solve ಮಾಡಿ ಎಂದು ಹೇಳುವುದಕ್ಕೆ ಪ್ರಯತ್ನಪಟ್ಟರೆ, ಇವರು ಮಾಡುತ್ತಿರುವುದೇನು? National Security Act invoke ಮಾಡುತ್ತಿದ್ದೇವೆನ್ನುತ್ತಾರೆ. ನೀವು NSA ಪ್ರಕಾರ doctor ಗಳನ್ನು ಬಂಧಿಸಿ ಅವರಿಂದ ಕೆಲಸ ಮಾಡಿಸುವುದಕ್ಕೆ ಸಾಧ್ಯವೇ? ಏತಕ್ಕೋಸ್ಕರ strike ನಡೆಯುತ್ತಿದೆ? ಕಳೆದ 3 ವರ್ಷಗಳಿಂದ ವೈದ್ಯಕೀಯ ಸಿಬ್ಬಂದಿಯವರು ಸರ್ಕಾರದ ಮುಂದೆ ಒಂದು ಡಿಮ್ಯಾಂಡ್ ಅನ್ನು ಇಟ್ಟುಕೊಂಡು ಬಂದಿದ್ದಾರೆ. ಹಂತಹಂತವಾಗಿ ಸರ್ಕಾರದ ಮೇಲೆ ಒತ್ತಾಯವನ್ನು ಮಾಡಿಕೊಂಡು ಬಂದಿದ್ದಾರೆ. ಅವರ demands ಎಲ್ಲವನ್ನೂ ಒಪ್ಪುವಂಥ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೀರಿ. ಆದರೆ, ಮುಖ್ಯವಾಗಿರುವ ಒಂದು ಬೇಡಿಕೆ

ಎಂದರೆ, ಈಗಾಗಲೇ medical colleges ಗೆಂದು ಕೊಟ್ಟಿರುವ ಕೆಲವು ಕಾಲೇಜುಗಳಿವೆ, ಆ medical college ಗಳು clinical facility ಗಳನ್ನು ಮಾತ್ರ ಮಾಡಲಿ, administration ಅನ್ನು ಅವರಿಗೆ ಕೊಡಬಾರದೆಂಬುದು ಅದರ ವಾದ. ಕಾರಣವೇನೆಂದರೆ, senior doctors ಗೆ ಅವಕಾಶ–ವಿಲ್ಲದಂತಾಗುತ್ತದೆ. ಎಲ್ಲದಕ್ಕಿಂತ ಮುಖ್ಯವಾಗಿ ನಾನು speaker ರವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಹಿಂದೆ ಮಾರ್ಗದ ಮಲ್ಲಪ್ಪನವರು ಮಂತ್ರಿಯಾಗಿದ್ದು ಸಂದರ್ಭದಲ್ಲಿ ಒಬ್ಬರೇ Director ಇದ್ದರು. ಆಗ ಬಹಳ ಚೆನ್ನಾಗಿ ನಡೆಯುತ್ತಿತ್ತು. ಯಾವುದೋ ಒಂದು ಕಾರಣಕ್ಕೋಸ್ಕರ Medical Education and Medical Department ಎಂದು ಬೇರೆ ಬೇರೆಯಾಗಿ ಅಂದರೆ ನಮ್ಮ ಅನುಕೂಲಕ್ಕೋಸ್ಕರ compartmentalize ಮಾಡಿ ಈ department ಅನ್ನು ಹಾಳುಗೆಡುವಂಥ ಕೆಲಸ ಮಾಡಿದ್ದೀರಿ. ಒಬ್ಬರೇ Director ಇದ್ದಾಗ ಯಾವ ಸಮಸ್ಯೆಯೂ ಬರುತ್ತಿರಲಿಲ್ಲ. ನಾವು ನಮಗೋಸ್ಕರ ಇದೆಲ್ಲ ಸಮಸ್ಯೆ ಹುಟ್ಟು ಹಾಕುತ್ತಿರುವಂಥದ್ದು. ಎಲೋ ಒಂದು ಕಡೆಗೆ ಒಂದು control ನಲ್ಲಿರುವ ಕೆಲಸವಾಗಬೇಕು. Medical college ಮಾಡಬೇಕಾದಾಗ Autonomous ಎಂದು ಮಾಡಿದರು. Autonomous ಎಂದು ಮಾಡಿದಾಗ ಏನಾಯಿತು ಎನ್ನುವಂಥ ವಿಚಾರ ನಿಮಗೆ ಗೊತ್ತಿದೆ. ಹಿಂದೆ ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ರಾಮಚಂದ್ರೇಗೌಡರವರು ರಾಜೀನಾಮೆ ಕೊಟ್ಟರು. ಕೋರ್ಟ್‌ನಲ್ಲಿ strictures pass ಆಯಿತು. ಅಲ್ಲಿ autonomous ಆಗಿರುವಂಥದ್ದರಲ್ಲಿ ಬೇಕಾಬಿಟ್ಟಿ ಅವರು appointment ಗಳನ್ನು ಮಾಡಿ, ಅಲ್ಲಿ ನಿಯಮಗಳ ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ court consider ಮಾಡಿ ಅವರ ಮೇಲೆ strictures pass ಮಾಡಿದಂಥ ಹಿನ್ನೆಲೆಯಲ್ಲಿ ರಾಮಚಂದ್ರೇಗೌಡರವರು ರಾಜೀನಾಮೆ ಕೊಡತಕ್ಕಂಥ ಪ್ರಸಂಗ ಬಂತು ಎನ್ನುವುದನ್ನು ಸರ್ಕಾರ ಮರೆಯಬಾರದು. ಆ ನಿದರ್ಶನವಿದ್ದಾಗ್ಯೂ ಇವತ್ತೂ ಕೂಡ ಮತ್ತೆ ಆ ಪ್ರಕಾರವಾಗಿ ನಾನೊಬ್ಬ ಸಾಮಾನ್ಯ ಪ್ರಜೆಯಾಗಿ ಕೇಳುತ್ತಿದ್ದೇನೆ. ಇವತ್ತು medical colleges ಗೋಸ್ಕರ ಅದರ ಅವಶ್ಯಕತೆ ಇತ್ತೇ? Autonomous status ಅನ್ನು ಕೊಟ್ಟು ಯಥಾಪ್ರಕಾರ ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಮಾಡಿಕೊಟ್ಟರೆ senior doctors ಗೆ

ಏನಾಗಬೇಕು? ದಯಮಾಡಿ, ಇದನ್ನು ಮರುಪರಿಶೀಲನೆ ಮಾಡುವ ಕೆಲಸವನ್ನು ಮಾಡಿ. ಇದು ತಪ್ಪಾಗುತ್ತಿದೆ.

ಅಧ್ಯಕ್ಷರು: ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : 4 ದಿವಸಗಳ ಕಾಲ strike ಆಗಿರುವ ನಿದರ್ಶನ ಯಾವತ್ತೂ ಇಲ್ಲ.

ಅಧ್ಯಕ್ಷರು : ಅವರು ಉತ್ತರ ಹೇಳಲಿ. ಇದು ಶೂನ್ಯವೇಳೆ.

ಶ್ರೀ ಟಿ.ಬಿ. ಜಯಚಂದ್ರ : ಇದರಲ್ಲಿ ಸರ್ಕಾರದ ಜವಾಬ್ದಾರಿ ಇದೆ. ನನಗೆ ಗೊತ್ತಾದ ಪ್ರಕಾರ, Cabinet Sub-committee ಮಾಡಿದ್ದಾರೆ. ಆ ಸಭೆಗೆ ವೈದ್ಯಕೀಯ ಶಿಕ್ಷಣ ಸಚಿವರು ಹೋಗಲಿಲ್ಲವೆನ್ನುವುದು ಒಂದು ಕಾರಣ. ವೈದ್ಯಕೀಯ ಶಿಕ್ಷಣ ಸಚಿವರು ಅಲ್ಲಿಗೆ ಹೋಗಲಿಲ್ಲ, ಒಂದು statement ಕೊಡುತ್ತಾರೆ. ಅದು Pioneer ಎನ್ನುವಂಥ ಪತ್ರಿಕೆಯಲ್ಲಿ ಬಂದಿದೆ. "Minister for Medical Education pours water on Government doctors' joy" ಎಂದು ಬರೆಯುತ್ತಾರೆ. ಅಲ್ಲಿ ಮಂತ್ರಿಯವರು ಹೇಳುತ್ತಾರೆ. "Ramdas told the Bangalore Mirror, whatever the Association has talked is not true. when the Sub-committee has not met, where is the question of the doctors favouring? Further under any circumstances we will not hand over the hospitals to Health and Family welfare Department. All of them have become autonomous organizations like Bangalore Medical College. All those doctors want to merge their political ambitions by contesting in the elections." Sub-committee ಯಲ್ಲಿ ಕುಳಿತುಕೊಂಡು ತೀರ್ಮಾನ ಮಾಡಿ ಎಂದು ಹೇಳಿದರೆ, ನೀವು ಪತ್ರಿಕೆಯಲ್ಲಿ ಬೇಕಾಬಿಟ್ಟಿ ಹೇಳಿಕೆ ಕೊಡುತ್ತಾ ಹೋದರೆ Association ನವರಿಗೆ ಇವತ್ತು ಏನು message ಹೋಗುತ್ತದೆ? ಅವರು, ಮಂತ್ರಿಯವರು ಈ ತರಹ ಹೇಳಿದರೆ, ನಾವು strike ಮಾಡಿಯೇ ಮಾಡುತೇವೆಂದು ಹೇಳುತ್ತಾರೆ.

ಅಧ್ಯಕ್ಷರು : ಅವರು ಉತ್ತರ ಹೇಳಲಿ.

ಶ್ರೀ ಟಿ.ಬಿ. ಜಯಚಂದ್ರ : ಮಂತ್ರಿಯವರು Cabinet Sub-committee ಗೆ ಹೋಗದೆ ಹೊರಗಡೆ statement ಕೊಡುವುದರಿಂದ

ಆಗುತ್ತಿರುವ ಅನಾಹುತಕ್ಕೆ ಯಾರು ಜವಾಬ್ದಾರರು? ಇವತ್ತು ಬೀದಿಯಲ್ಲಿ ಹೆರಿಗೆಯಾಗುತ್ತಿದೆ, ಜನ ಸಾಯುತ್ತಿದ್ದಾರೆ. ಅದಕ್ಕೆ ಯಾರು ಹೊಣೆಗಾರರು? ನೀವು ಹೊಣೆಗಾರರಾಗುತ್ತೀರಾ? ನನಗನಿಸುತ್ತದೆ, National Security Act ಪ್ರಕಾರ, ಯಾರನ್ನು ಬಂಧಿಸಬೇಕೆಂದರೆ, ಈ strike ಗೆ ಮೂಲ ಕಾರಣರು ಯಾರಿದ್ದರೆ Assoiation ನವರಿರಬಹುದು, ಯಾರೇ ಇರಬಹುದು, ಅವರನ್ನು ಬಂಧಿಸಬೇಕೆಂದು ನಾನು ಹೇಳುತ್ತಿದ್ದೇನೆ. ಇವತ್ತು ಡಾಕ್ಟರ್‌ಗಳನ್ನು ಬಂಧಿಸಿ ಅವರಿಂದ ಕೆಲಸ ಮಾಡಿಸುವುದಕ್ಕೆ ಸಾಧ್ಯವಿಲ್ಲ. ದಯಮಾಡಿ, ಯಾವುದೋ ರೀತಿಯಲ್ಲಿ ಈ issue solve ಆಬೇಕು. Cabinet Sub-committee ಯಲ್ಲಿ ಆಗಲಿಲ್ಲವೆಂದರೆ, ಈ ಸದನದಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡುವ ಕೆಲಸವನ್ನು ಮಾನ್ಯ ಅಧ್ಯಕ್ಷರೆ ತಾವು ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ಅಧ್ಯಕ್ಷರೆ, ವೈದ್ಯರು ಮತ್ತು ಅರೆ ವೈದ್ಯಕೀಯ ಸೇವೆ ಸಿಬ್ಬಂದಿಯವರು strike ಮಾಡುತ್ತಿದ್ದಾರೆಂದು ನಾನು ಮೊನ್ನೆ question hour ನಲ್ಲಿ raise ಮಾಡಿ ಸರ್ಕಾರಕ್ಕೆ ಮನವಿ ಮಾಡಿ, ಅವರನ್ನು ಕೂಡಲೆ ಕರೆದು ಸಮಸ್ಯೆ ಬಗೆಹರಿಸಿ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಂಡಿದ್ದೆ. ಮುಂದುವರೆದು, post mortem ಮಾಡುವುದಕ್ಕೂ ಕೂಡ ವೈದ್ಯರು ಸಹಕಾರ ಕೊಡದಿರುವುದು ನಿಜವಾಗಿಯೂ ಖಂಡನೀಯ. It is not correct. ಮೂಲಕ ಸಮಸ್ಯೆ ಎಂದರೆ, what made the Government to merge the hospitals with those whicth are with the Health Department, with that of Medical Education Department? ಯಾವ recommendation ಇತ್ತು? Under what provision they have taken the decision? ಇದು heart burning ಗೆ ಕಾರಣವಾದಂಥದ್ದು. ಏಕೆ, ಯಾವ ಉದ್ದೇಶಕ್ಕೆ ಮಾಡಿದಿರಿ? ನಿಮಗೆ ಯಾವ guidelines ಇತ್ತು? ಯಾವ recommendations ಇತ್ತು? Autonomous institutions ನಲ್ಲಿರತಕ್ಕಂಥ Cadre and Recruitment Rules ಬೇರೆ, ಇದೇ ಬೇರೆ. ಅವರ ಸ್ಯಾಲರಿ ಜೊತೆಗೆ ನಮ್ಮ ಸ್ಯಾಲರಿ ಕೂಡ ಕೊಡಬೇಕೆಂದು on par with the teaching faculty ಕೊಡಿ ಎಂದು ಅವರು demand ಇಟ್ಟಿದ್ದಾರೆ. ನೀವು

Cabinet Sub-committee ಯನ್ನು ಕಾಯಬೇಕಾದ ಅಗತ್ಯವಿಲ್ಲ. Time-bound programme ಕೊಡಬೇಕೆಂದು ನಾನೇ ಇದ್ದಾಗ ಮತ್ತು ಡಾ: ಮಾಲಕರೆಡ್ಡಿಯವರು ಇದ್ದಾಗ ಮೀಟಿಂಗ್ ಮಾಡಿ ಆಯಾ ಕಾಲಕ್ಕೆ promotion ಕೊಡುವುದು ಮತ್ತು paramedical staff ಗೂ ಕೂಡ ಅವರ genuine demands ಗೆ ಗಮನ ಕೊಡುವುದು ಈ ತರಹ ಅನೇಕ ವಿಷಯಗಳನ್ನು ಚರ್ಚೆ ಮಾಡಿದ್ದೆವು. ನಾವು ಮಾಡಿರುವ proceedings ಅನ್ನಾದರೂ ತಾವು ಓದಿ. ಈಗ ನೀವು ಇದನ್ನು ಬಿಟ್ಟು, ರಾಜ್ಯದ 40% ಜನರು ಸರ್ಕಾರಿ ಆಸ್ಪತ್ರೆಗಳನ್ನೇ depend ಆಗಿದ್ದಾರೆ. ಖಾಸಗಿ ಆಸ್ಪತ್ರೆಗಳಲ್ಲಿ health ಎನ್ನುವುದು ಒಂದು ದುಬಾರಿ ವೆಚ್ಚದ ಸೇವೆ. ಖಾಸಗಿ ಆಸ್ಪತ್ರೆಗಳಲ್ಲಿ ಹೋಗಿ ಸೇವೆ ಪಡೆದುಕೊಳ್ಳುವ ಆರ್ಥಿಕ ಸಂಪನ್ಮೂಲ ಈ ಜನರಿಗಿಲ್ಲ. ಇವತ್ತು ಏನೇನು ಅನಾನುಕೂಲವಾಗಿದೆ ಇದಕ್ಕೆ ನೇರವಾಗಿ ಸರ್ಕಾರವೇ ಹೊಣೆ.

ಅಧ್ಯಕ್ಷರು : Please, ಅವರು ಉತ್ತರ ಹೇಳಲಿ.

ಡಾ: ಹೆಚ್.ಸಿ. ಮಹದೇವಪ್ಪ: ಇದನ್ನು ಬೇರ್ಪಡಿಸುವ ಕೆಲಸವನ್ನು ಮಾಡಬಾರದಾಗಿತ್ತು. ಅವರ genuine demands ಏನಿದೆ, ಅವುಗಳನ್ನು ನೀವು ಕೂಡಲೆ ಬಗೆಹರಿಸಬೇಕು. Time-bound promotion ಕೊಡಬೇಕು. Medical college ನವರಿಗೆ ಏನು ನೀವು ಸಂಬಳ ಕೊಡುತ್ತೀರಿ, ಅದೇ ರೀತಿ ಸಂಬಳ ಕೊಡಬೇಕು. So much of Para Medical staff, Group-D ನವರೂ ಕೂಡ ಕಸ ಗುಡಿಸುವುದಕ್ಕೆ ಬರದೆ ಬಾಗಿಲು ಮುಚ್ಚಿಕೊಂಡರೆ patients ಗತಿ ಏನಾಗಬೇಕು? ನಾವಿದ್ದಾಗಲೂ ಒಂದೆರಡು ದಿನ ನಡೆದು ಈ ಆಧಾರದ ಮೇಲೆಯೇ proceedings ಮಾಡಿ ಏನೇನು demands ಇತ್ತು, ಯಾವ್ಯಾವುದು ಮಾಡಬೇಕೆಂದು ಇತ್ತು, ಅದನ್ನು ನಾವು ಮಾಡಿದ್ದೆವು. ಅದನ್ನು ತೆಗೆದು ನೋಡಿ. Why are you waitting for the Cabinet Sub-committee to submit its report?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಉಪ ನಾಯಕರಾದ ಜಯಚಂದ್ರರವರು ಹಾಗೂ ಡಾ:ಹೆಚ್.ಸಿ.ಮಹಾದೇವಪ್ಪನವರು

ಶೂನ್ಯವೇಳೆಯಲ್ಲಿ ಈ ವಿಷಯದ ಬಗ್ಗೆ ಗಮನ ಸೆಳೆದಿದ್ದಾರೆ. ನಾನು ಈ ಜವಬ್ದಾರಿಯನ್ನು ವಹಿಸಿಕೊಂಡು ಮೇಲೆ ಈಗಗಲೇ ನಾಲ್ಕು ಬಾರಿ ವೈದ್ಯರುಗಳ ಮತ್ತು ವೈದ್ಯರ ಸಂಘಗಳ ಜೊತೆಗೆ ಸಭೆ ಮಾಡಿದ್ದೇನೆ. ಮೊದಲನೆ ಹೋರಾಟದಲ್ಲಿ ಸಂಬಳ ಹೆಚ್ಚು ಮಾಡಬೇಕೆನ್ನುವ ಬೇಡಿಕೆಯನ್ನಿಟ್ಟುಕೊಂಡು ನನ್ನ ಹತ್ತಿರ ಬಂದಿದ್ದರು. Allowances ಹೆಚ್ಚು ಮಾಡಿ ಎಂದು ಕೇಳಿದ್ದರು ಅದನ್ನು ಸರ್ಕಾರ ಪೂರೈಸಿದೆ. ಇದಕ್ಕೆ ಆಜ್ಞೆ ಕೂಡ ಆಗಿದೆ. ಅವರೇನು ಬೇಡಿಕೆಯನ್ನಿಟ್ಟಿದ್ದರು, ಅದನ್ನು ಸಂಪೂರ್ಣ ಸರ್ಕಾರ ಒಪ್ಪಿದೆ. ಆ ಸಂದರ್ಭದಲ್ಲಿ ಯಾವ ಕಾಲದಲ್ಲೂ ಆಗದೇ ಇರತಕ್ಕಂಥ ಹೆಚ್ಚಳ ನೀವು ಮಾಡಿದಿರಿ ಎನ್ನುವ ಸಂತಸವನ್ನು ವ್ಯಕ್ತಪಡಿಸಿ ಅವರು ಹೋದರು. ನಂತರ ಬೆಳಗಂ ಅಧಿವೇಶನ ಸಂದರ್ಭದಲ್ಲಿ ಅವರ ನಿಯೋಗ ಚರ್ಚೆಗೆ ಸಮಯ ಕೇಳಿತ್ತು. ನಾನು ಅವರ ಜೊತೆಗೆ ಚರ್ಚೆ ಮಾಡಿದ್ದೆ. ಅಲ್ಲಿ ಅವರು ತಿಂಗಳ ಮೊದಲನೆ ವಾರದಲ್ಲಿ ಸಂಬಳ ಕೊಡಬೇಕೆನ್ನುವ ಮತ್ತೋದು ಬೇಡಿಕೆ ತಂದರು. ಅದನ್ನೂ ನಮ್ಮ ಇಲಾಖೆ ಒಪ್ಪಿದೆ. RDPR, Finance Department ನವರ ಜೊತೆಗೆ ಮತ್ತು ಸಂಬಂಧಪಟ್ಟ ನಮ್ಮ ಇಲಾಖಾಧಿಕಾರಿಗಳು ಕುಳಿತು ಅದನ್ನೂ ಕೂಡ ಇತ್ಯರ್ಥ ಮಾಡಿದ್ದಾರೆ. ಆ ವಿಷಯದಲ್ಲಿ ಕೂಡ ಅವರ ಯಾವುದೇ ಭಿನ್ನಾಭಿಪ್ರಾಯವಿಲ್ಲ. ವರ್ಗಾವಣೆ ನೀತಿಯ ಬಗ್ಗೆ ಅವರೊಂದು ಬೇಡಿಕೆಯನ್ನಿಟ್ಟಿದ್ದಾರೆ. ಆ ಬೇಡಿಕೆಯನ್ನು ನಾವು ಕೂಡ ಒಪ್ಪಿದ್ದೇವೆ. ಅವರು ಹೇಳುವ ಸಣ್ಣಪುಟ್ಟ ಬದಲಾವಣೆಗಳು, ಸಲಹೆಗಳನ್ನು ಅವರಿಂದ ಕೇಳುತ್ತೇವೆ. ಏಕೆಂದರೆ, ವರ್ಗಾವಣೆ ನೀತಿ ಇದೇ ಸದನದಲ್ಲಿಯೇ ರೂಪಿತವಾಗಿರುವುದು. ಆ ಹಿನ್ನೆಲೆಯೊಳಗೆ doctors ಆಗಲಿ paramedical staff ಆಗಲಿ ಬೇರೆ staff ಆಗಲಿ 50%ಗಿಂತ ಕಡಿಮೆ ಯಾವ ಆಸ್ಪತ್ರೆಯಲ್ಲಿಯು, ಆಗಬಾರದು ಇರುವವರನ್ನು balance ಮಾಡಬೇಕೆನ್ನುವ ನೀತಿಯಡಿ ಬದಲಾವಣೆಗಳನ್ನು ಮಾಡಿದ್ದೇವೆ. ಅದಕ್ಕೂ ಕೂಡ ಒಪ್ಪಂದವಾಗಿ objections ಕೂಡ ಕರೆಯಲಾಗಿದ್ದು ಕಳೆದ ಫೆಬ್ರವರಿ 4ನೇ ತಾರೀಕು ಕೊನೆಯ ದಿನಾಂಕವಾಗಿತ್ತು. ಅದರ ಆಜ್ಞೆ ಇನ್ನೊಂದೆರಡು ದಿವಸದಲ್ಲಿ ಮಾಡುತ್ತೇವೆ. ಇವತ್ತು ನಾನು ಬೆಳಿಗ್ಗೆ ಸಭೆ ಕರೆದು ಈ ರೀತಿಯಾದ ಅನಗತ್ಯ ತೊಂದರೆಗಳು ಜನರಿಗೆ ಆಗುತ್ತಿವೆ, ಜನ ಕ್ಷಮಿಸುವುದಿಲ್ಲ, ಜನಕ್ಕೆ ತೊಂದರೆಗಳನ್ನು ಮಾಡಬೇಡಿ

ಎಂದು ಹೇಳಿದ್ದೇನೆ. ನಮ್ಮ ಅಧಿಕಾರಗಳು ಕಳೆದ ಮೂರು ದಿವಸಗಳಿಂದ ನಿರಂತರವಾಗಿ ಅವರ ಜೊತೆಯಲ್ಲಿ ಚರ್ಚೆಯಲ್ಲಿದ್ದಾರೆ. ಇವತ್ತು ಬಂದ ಹೊಸ ಬೇಡಿಕೆ ಏನೆಂದರೆ, Paramedical staff ನವರಿಗೆ rural allowance ಕೊಡಿ ಎನ್ನುವುದು ಅದನ್ನೂ ನಮ್ಮ ಇಲಾಖೆಯವರು ಒಪ್ಪಿದ್ದಾರೆ. ಈಗಾಗಲೇ ಇಲಾಖೆ ಒಪ್ಪಿಕೊಂಡು Finance Department ನವರ ಜೊತೆಗೆ ಚರ್ಚಿಸಿ ಇನ್ನು 3–4 ದಿವಸದೊಳಗೆ ಆ ಆಜ್ಞೆಯನ್ನೂ ನಾವು ಹೊರಡಿಸಿ ಅದನ್ನು implement ಮಾಡುತ್ತೇವೆ. ಇವು ನಮ್ಮ ಇಲಾಖೆಗೆ ಸಂಬಂಧಪಟ್ಟಂತಹ ವಿಷಯಗಳು. ಮುಖ್ಯವಾಗಿ ಇಲ್ಲಿ doctors ಬಗ್ಗೆ ಹೇಳತಕ್ಕಂಥದ್ದು ಚರ್ಚೆಯಾಗತಕ್ಕಂಥದ್ದು ಏನೆಂದರೆ, ಆ ಏಳು ಆಸ್ಪತ್ರೆಗಳೇನು ನಾವು Medical Education Department ಕೊಟ್ಟಿದ್ದೇವೆ ಅದನ್ನು ವಾಪಸ್ ತೆಗೆದುಕೊಳ್ಳಿ ಎನ್ನುವ ಬೇಡಿಕೆ ಅವರದ್ದಾಗಿದೆ. ಮೊದಲು 11 ಆಸ್ಪತ್ರೆಗಳೆಂದು ಶುರುವಾಯಿತು. 11 ಆಸ್ಪತ್ರೆಗಳಲ್ಲಿ ನಮಗೆ 4 ಆಸ್ಪತ್ರೆಗಳು ವಾಪಸ್ ಬಂದಿವೆ. ಮಂಗಳೂರು ಆಸ್ಪತ್ರೆ ವಾಪಸ್ ಬಂದಿದೆ, ಅಲ್ಲಿ medical college ಇಲ್ಲ. ಅದೇ ತರಹ ದಾವಣಗೆರೆ, ಗುಲ್ಬರ್ಗಾ ಆಸ್ಪತ್ರೆ ವಾಪಸ್ ಬಂದಿದೆ ಈಗ ESI ನಿಂದ medical college ಮಾಡಿದ್ದಾರೆ ಅವರಿಗೆ clinical facilities ಕೊಟ್ಟಿದ್ದೇವೆ. ಇತ್ತೀಚೆಗೆ catinet ನ ತೀರ್ಮಾನದಂತೆ ನಮ್ಮ ಸದನದ ಎಲ್ಲಾ ಸದಸ್ಯರುಗಳ ಸಲಹೆಯಂತೆ ಎಲ್ಲಾ ಜಿಲ್ಲೆಗೊಂದು medical college ಬೇಕೆನ್ನುವ ಹಿನ್ನೆಲೆಯಲ್ಲಿ ಹೊಸ medical college ಗಳನ್ನು ಸ್ಥಾಪನೆ ಮಾಡಬೇಕೆಂದು cabinet ತೀರ್ಮಾನ ತೆಗೆದುಕೊಂಡಾಗ ಅಲ್ಲಿನ ಜಿಲ್ಲಾ ಆಸ್ಪತ್ರೆಗಳನ್ನು Medical Education Department ನವರು ಕೇಳಿದಾಗ ನಾವು ಸ್ಪಷ್ಟವಾದ ನಿಲುವು ಹೇಳಿದ್ದೇವೆ, ಅದಕ್ಕೂ ಅವರು ಕೂಡ ಒಪ್ಪಿದ್ದಾರೆ. ಎಲ್ಲಾ ಜಿಲ್ಲಾ ಆಸ್ಪತ್ರೆಗಳು ನಮ್ಮ ಜೊತೆಗೆ ಇರುತ್ತವೆ, clinical facilities ಮಾತ್ರ Medical Education Departments ನ Medical Education Department medical colleges ಗೆ ಒದಗಿಸುತ್ತೇವೆಂದು ಹೇಳಿದ್ದೇವೆ. ಇದರಲ್ಲಿ ಸಮಸ್ಯೆ ಉಂಟಾಗಿದ್ದು ಎಲ್ಲಿ ಎಂದರೆ, MCI ನ ಹಳೆಯ rules ಅನ್ನು ಈಗ amend ಮಾಡಿದ್ದಾರೆ. Clinical facilities ಅನ್ನು ಸರ್ಕಾರಿ medical college ಗಳು ಮಾಡಿದರೆ, mother department or other department ನಲ್ಲಿ ಅವರು medical facilities

ಗೋಸ್ಕರ clinical facilities ಕೊಟ್ಟರೆ ಸಾಕು ಎಂದು ಈಗ amendment ಆಗಿದೆ. ಈ college ಗಳು ಸ್ಥಾಪನೆಯಾಗುವ ಸಂದರ್ಭದಲ್ಲಿ MCI rules ಪ್ರಕಾರ ಅವರಿಗೆ ಆಸ್ಪತ್ರೆಗಳು ಹೋಗದೆ. ಹೀಗಾಗಿ 7 ಜಿಲ್ಲಾ ಆಸ್ಪತ್ರೆಗಳು ಅವರ ನಿಯಂತ್ರಣದಲ್ಲಿವೆ. ಅವುಗಳನ್ನು ವಾಪಸ್ ತೆಗೆದುಕೊಳ್ಳಿ ಎಂದು ಅವರು ಒತ್ತಾಯವನ್ನು ಹೇರುತ್ತಿದ್ದಾರೆ. ಇದಕ್ಕೆ cabinet ನ ಉಪಸಮಿತಿಯನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳು ನೇಮಿಸಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಅಶೋಕರವರು ಆ ಸಮಿತಿಯ ಅಧ್ಯಕ್ಷರಾಗಿದ್ದಾರೆ, ನಾನು ಹಾಗೂ ಮಾನ್ಯ ರಾಮದಾಸ್‌ರವರು ಮತ್ತು ಸುರೇಶ್ ಕುಮಾರ್‌ರವರು ಆ ಸಮಿತಿಯಲ್ಲಿದ್ದೇವೆ. ನಾಲ್ಕು ಜನರ cabinet Sub committee ಒಂದು ಸಾರಿ ಸೇರಿತ್ತು. ಆ ದಿನ ಮಾನ್ಯ ರಾಮದಾಸ್‌ರವರು ತಮ್ಮ ಕಾರ್ಯದ ಒತ್ತಡದ ಮೇರೆಗೆ ಅನುಮತಿಯೊಂದಿಗೆ ಬಂದಿರಲಿಲ್ಲ ಎರಡನೇ ಸಭೆಗೆ ಬರುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಬರುವ ವಾರದಲ್ಲಿ Cabinet Sub-committee ಸೇರುತ್ತದೆ. ನನ್ನ ಪ್ರಕಾರ ಇದರಲ್ಲಿ ಡಾ: ಮಹದೇವಪ್ಪನವರಿಗೆ ಮತ್ತು ಜಯಚಂದ್ರರವರಿಗೆ ಸ್ವಾಭಾವಿಕವಾಗಿ ಅರ್ಥ ಆಗಿಯೇ ಆಗುತ್ತದೆ. ಅಕಸ್ಮಾತ್ ತಕ್ಷಣ ಆಸ್ಪತ್ರೆಗಳನ್ನು ನಾವು ವಾಪಸ್ ತೆಗೆದುಕೊಂಡರೆ MCI ನವರು de-recognize ಮಾಡುವ ಸಾಧ್ಯತೆಗಳಿವೆ. ಅವರ ಕೆಲವು ಸಮಸ್ಯೆ ಏನಿದೆ ಎಂದರೆ, ಇಲ್ಲಿರುವಂಥ ನಮ್ಮ doctors promotion ಇದರಿಂದ ತಪ್ಪಿ ಹೋಗುತ್ತೆ ಎನ್ನುವ ಮುಖ್ಯವಾದಂಥ contention ಅದು. ಆ ಹಿನ್ನೆಲೆಯಲ್ಲಿ ಅವರಿಗೆ ಹೇಗೆ ನ್ಯಾಯ ಕೊಡಬೇಕು ಎನ್ನುವುದನ್ನು ಈ Sub-committee ಚರ್ಚೆ ಮಾಡುತ್ತಿದೆ. ಆ ಹಿನ್ನೆಲೆಯೊಳಗೆ ಮಾನ್ಯ ಜಯಚಂದ್ರರವರು, ಇವೆಲ್ಲಾ ಕೂಡಿ ಇಲಾಖೆ ಒಂದೇ ಇದ್ದರೆ ಬಹಳ ಒಳ್ಳೆಯದು ಎಂದು indirect ಆಗಿ ಒಂದು ಸಲಹೆ ಕೊಟ್ಟರು. ಆ ಸಲಹೆಯನ್ನೂ ಕೂಡ Sub committee ಯಲ್ಲಿ ನಾವು ಚರ್ಚೆ ಮಾಡುತ್ತೇವೆ. ಇದರಲ್ಲಿ inter-related, ಎರಡು ಇಲಾಖೆಗಳಿಗೆ ಸಂಬಂಧಪಟ್ಟಂಥ issue ಆಗಿರುವುದರಿಂದ ಅಲ್ಲಿಯ ಸಾಧಕ–ಬಾಧಕಗಳನ್ನು ಮುಂದಿನ ಸಭೆಯಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಂಡಿಸುತ್ತೇನೆಂದು ಹೇಳಿದ್ದಾರೆ. ಆ ಹಿನ್ನೆಲೆಯೊಳಗೆ ಇದು ಸಮಸ್ಯೆ ಉದ್ಭವವಾಗಿದೆ. ಈ ಸದನದ ಮೂಲಕ ನಾನು ಎಲ್ಲಾ ವೈದ್ಯರಲ್ಲಿ

ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಕೆಲಸಕ್ಕೆ ಹಾಜರಾಗಿ. ಏಕೆಂದರೆ, ಇದು technical and legal issue ಆಗಿರುವುದರಿಂದ ಅದನ್ನೇ ದೊಡ್ಡ issue ಮಾಡಿ ಜನರ ಆರೋಗ್ಯ ಹಾಳು ಮಾಡಬೇಡಿ, ಜನರನ್ನು ತೊಂದರೆಗೀಡು ಮಾಡಬೇಡಿ ಅದಕೋಸ್ಕರ ಈ ಸದನದ ಮುಖಾಂತರ ತಮ್ಮ ಮುಖಾಂತರ ನಾನು ಎಲ್ಲಾ ವೈದ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಬೆಳಿಗ್ಗೆ ಕೂಡ ನಾನು ಎಲ್ಲರಿಗೂ ವಿನಂತಿ ಮಾಡಿಕೊಂಡಿದ್ದೇನೆ. ಈಗಲೂ ನಾನು ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ವಾಪಸ್ ನಿಮ್ಮ ಕೆಲಸಗಳಿಗೆ ಹೋಗಿ ಗ್ರಾಮೀಣ ಭಾಗದಲ್ಲಿ ಇಡೀ ರಾಜ್ಯದಲ್ಲಿ ಆರೋಗ್ಯದ ಸಮಸ್ಯೆಯನ್ನು ನಿವಾರಿಸಿ. ನಿಮಗೇನಾದರೂ ಸಮಸ್ಯೆ ಇದ್ದರೆ ನಮ್ಮ ಹತ್ತಿರ ಬನ್ನಿ ಚರ್ಚೆ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ ಎಂದು ಹೇಳಿದೆ. ನಾಲ್ಕು ಬಾರಿ ಚರ್ಚೆ ಮಾಡಿದ್ದೇನೆ. ನನಗೆ ಅಗಿರುವ ಆಶ್ಚರ್ಯ ಏನೆಂದರೆ, ಪ್ರತಿ ಸಾರಿ ಚರ್ಚೆಗೆ ಬಂದಾಗ ಅವರು ಎರಡೆರಡು ಹೊಸ ಬೇಡಿಕೆಗಳನ್ನು ತರುತ್ತಾರೆ. ಒಟ್ಟು ನಿಮ್ಮ ಬೇಡಿಕೆಗಳೇನಿವೆ ಅವುಗಳನ್ನು ಪಟ್ಟಿ ಮಾಡಿ ಕೊಡಿ ಎಂದು ನಾನು ಪ್ರಾರಂಭದಲ್ಲಿ ಹೇಳಿದ್ದೇನೆ. ಅನಗತ್ಯವಾಗಿ ತಿಂಗಳಿಗೊಂದು ಸಾರಿ ಈ ರೀತಿಯಾಗಿ ಎರಡೆರಡು ಬೇಡಿಕೆಗಳನ್ನು ತಂದು, ಸತ್ಯಾಗ್ರಹಕ್ಕೆ ಹೋಗುವುದು, ಹೋರಾಟಕ್ಕೆ ಹೋಗುವುದು ಸೂಕ್ತವಲ್ಲ. ಇದು essential service, ಇದನ್ನು ಮಾಡಲೇಬೇಕು. ನಾವು NSA invoke ಮಾಡಲಿಕ್ಕೆ ಹೊರಟಿದ್ದೇ– ವೆಂದರೆ ಅರ್ಥ ಅದು case ಹಾಕಬೇಕೆನ್ನುವ ಉದ್ದೇಶದಿಂದಲ್ಲ. ಜನರ ಆರೋಗ್ಯ ರಕ್ಷಣೆ ಮಾಡಬೇಕೆನ್ನುವ ಕಾರಣಕ್ಕಾಗಿ ಆ ರೀತಿಯ ಚಿಂತನೆ ಮಾಡಿದ್ದೇವೆ. High court ಕೂಡ ಬಹಳ ಸ್ಪಷ್ಟವಾಗಿ ಯಾವುದೇ ಕಾರಣಕ್ಕೂ ಸತ್ಯಾಗ್ರಹವನ್ನು ಹೋರಟವನ್ನಾಗಲಿ ಮಾಡಬಾರದು ಎಂದು ಹೇಳಿದೆ. ಅವರಿಗೆ ಪದೇ ಪದೇ ವಿನಂತಿಯನ್ನು ಮಡಿಕೊಳ್ಳುತ್ತಿದ್ದೇವೆ. ಅದಕೋಸ್ಕರ ಇದರಲ್ಲಿ ಯಾವುದೇ ಗುಮಾನಿಗಳಿಗೆ ಅವಕಾಶ ಕೊಡದೆ ಯಾರ ಹಿಡಿತದಲ್ಲಿಯೂ ಇರದೆ ರಾಜ್ಯದ ಜನರ ಆರೋಗ್ಯ ಕಾಪಾಡುವಂಥ ಕೆಲಸ ನಿಮ್ಮದು, ಅದಕ್ಕೆ ಸರಕಾರವೂ ಬದ್ಧವಾಗಿದೆ ಮತ್ತು ಸರಕಾರಿ ನೌಕರರಾಗಿ ನೀವು ಕೂಡ ಬದ್ಧರಾಗಬೇಕೆಂದು ವಿನಂತಿಯನ್ನು ನಾನು ಬೆಳಿಗ್ಗೆ ಮಾಡಿದ್ದೇನೆ. ಮತ್ತೊಂದು ಸಾರಿ ಈ ಸದನದ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಈಗ ಮತ್ತೆ ಅವರು ಒಂದು ವಾರ ಎಂದರೆ, ಪರಿಸ್ಥಿತಿ ಹೇಗಿದೆ ಎಂದರೆ, ನಾನು ಮೊನ್ನೆ ದಾರಿಯಲ್ಲಿ ಹೋಗಬೇಕಾದರೆ accident ಆಗಿತ್ತು. ಆಗ ನಾನು Chief Medical Officer ಗೆ phone ಮಾಡಿ ಕೇಳಿದರೇ strike ನಲ್ಲಿದ್ದೇವೆಂದರು. 108 ಆಂಬ್ಯುಲೆನ್ಸ್ ಅನ್ನು ಕರೆಸಿದ್ದೇವೆ, ಆ patients ಅನ್ನು ಎಲ್ಲಿಗೆ ಕಳುಹಿಸಬೇಕೆಂದು ನಮಗೆ ಅರ್ಥವಾಗಲಿಲ್ಲ. private hospital ಗೆ ಕಳುಹಿಸಿ treatment ಮಾಡಿಸಿದೆವು. ನೀವು Sub-committee ಸೇರಬೇಕೆಂದರೆ ಇನ್ನೊಂದು ವಾರವಾದರೆ ಜನರ ಪರಿಸ್ಥಿತಿ ಹೇಗೆ? ಆ ದಿವಸ ನಾವು ಅವರನ್ನು private hospital ಗೆ ಸೇರಿಸಿದೆವು. ಆ paper ಮಾರುವ ಹುಡುಗ ದಾರಿಯಲ್ಲಿ ಸತ್ತು ಹೋಗಿದ್ದ. ಇವರು ಇನ್ನೊಂದು ವಾರ ಆಗುತ್ತದೆ ಎಂದು ಹೇಳಿದರೆ, ವಾರದವರೆವಿಗೂ doctors hospitals ಗೆ ಹೋಗಲಿಲ್ಲವೆಂದರೆ ಹೇಗೆ? ಎಲ್ಲಾ ಕಡೆಯೂ ನಾವು ಶಾಸಕರು ಇರುವುದಿಲ್ಲ. ಬಡವರು ಎಲ್ಲಿ ಹೋಗಬೇಕು? ಅವರ ಜೀವನದ ಗತಿ ಏನು? ನೀವು ಮುಂದಿನವಾರ ಸೇರುತ್ತೇವೆ ಎಂದರೆ ಹೇಗೆ? ನಾಳೆ ಸಭೆ ಸೇರಿ ಅದೇನು ಡಿಸೈಡ್ ಮಾಡುತ್ತೀರೋ ಮಾಡಿ. ನೀವು ಇನ್ನೊಂದು ವಾರ ಮಾಡಿ, doctors hospitals ಹೋಗದಿದ್ದರೆ ಜನ ಸಾಮಾನ್ಯರ ಗತಿ ಏನು?

ಅಧ್ಯಕ್ಷರು : Please, ನೀವು ಉತ್ತರ ಹೇಳುವುದಕ್ಕೆ ಬಿಡಲಿಲ್ಲವೆಂದರೆ ಇದನ್ನು ಮುಕ್ತಾಯ ಮಾಡೋಣ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಸದಸ್ಯರಾದ ನಾಡಗೌಡರವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಹೇಳಿದೆ. ಇದು legal issue ಗೆ ಸಂಬಂಧಪಟ್ಟಿದ್ದು. MCI ಗೆ related issue. ಅಲ್ಲಿ society ಎಂದು ಮಾಡಿದ್ದಾರೆ. ಈಗಾಗಲೇ ನಾನು ಹೇಳಿದ ಹಾಗೆ ನಾಲ್ಕು ಆಸ್ಪತ್ರೆಗಳನ್ನು ವಾಪಸ್ ತೆಗೆದುಕೊಂಡಿದ್ದೇವೆ. ಇದರಲ್ಲಿ legal issue and MCI issue ಗಳಿರುವುದರಿಂದ, Sub-committee ಯ ಎರಡನೇ meeting ನಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತೇವೆ ಆ ಕಾರಣಕ್ಕಾಗಿ ಡಾಕ್ಟರ್ಸ್‌ಗಳ ಮೂಗು ಹಿಡಿದು ಬಾಯಿ ತೆರೆಸುವ ಪದ್ಧತಿ ಏನಿದೆ ಅದನ್ನು ಖಂಡಿಸುತ್ತೇನೆ. ದಯವಿಟ್ಟು ಆ ರೀತಿ ಮಾಡಬೇಡಿ. ಇದರಿಂದ ಜನಗಳ ಆರೋಗ್ಯ ರಕ್ಷಣೆಯಾಗುವುದಿಲ್ಲ.

ಅದಕೋಸ್ಕರವೇ ನಾನು ಸದನದಲ್ಲಿ ವಿನಂತಿ ಮಾಡಿಕೊಂಡಿದ್ದು. ವಿರೋಧ ಪಕ್ಷದವರಾದ ನೀವು ವಿನಂತಿ ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಇದು ಮುಕ್ತಾಯಗೊಂಡಿದೆ. ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ. ಹೆಚ್.ಎಸ್.ಮಹದೇವ ಪ್ರಸಾದ್‌ರವರು.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅರವಿಂದ್ ಲಿಂಗಾವಳಿಯವರೇ, ತಾವು explanation ಕೊಡತಕ್ಕಂಥದ್ದು ಬೇರೆ. ಇವತ್ತಿನದಿವಸ ರೋಗಿಗಳಿಗೆ ಚಿಕಿತ್ಸೆ ಸಿಗುತ್ತಿಲ್ಲ. ಈಗಾಗಲೇ ಇಬ್ಬರು ರೋಗಿಗಳು ಸತ್ತಿದ್ದಾರೆಂದು ವರದಿಯಾಗಿದೆ. ಆಸ್ಪತ್ರೆಗಳಿಗೆ ಬೇಗ ಹಾಕಿಸಿದ್ದಾರೆ. ಬಡವರು ಹೆಚ್ಚಾಗಿ ಸರ್ಕಾರಿ ಆಸ್ಪತ್ರೆಗೆ ಹೋಗುತ್ತಾರೆ. ಸರ್ಕಾರಿ ಆಸ್ಪತ್ರೆಗಳೆಲ್ಲಾ ಮುಚ್ಚಿ ಇವತ್ತಿಗೆ ನಾಲ್ಕು ದಿವಸಗಳಾಗಿವೆ. ನಾಲ್ಕು ದಿನಗಳಿಂದ ಎಲ್ಲ ಕಡೆ ಚಳುವಳಿ ಮತ್ತು ಆಸ್ಪತ್ರೆಗಳ ಮುಂದೆ ಧರಣಿ ಮಾಡುತ್ತಿದ್ದಾರೆ. ಆದ್ದರಿಂದ, ಇದಕ್ಕೆ ಪರ್ಯಾಯವಾಗಿ ಏನು ಯೋಚನೆ ಮಾಡಿದೀರಿ? ನೀವು ಮತ್ತು ಅವರು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಒಂದು ಭಾಗ. ಅಂದರೆ, ಅವರನ್ನು ಕರೆದು ಮಾತನಾಡುವುದು ಮತ್ತು ಅವರಿಗೆ ಮಾನವೀಯತೆ ಇರಬೇಕೆಂಬುದು ಹಾಗೂ ಅವರು ಬಂದು ಚರ್ಚೆ ಮಾಡಿ ಬಗೆಹರಿಸಬೇಕೆಂದು ಒಂದು ಭಾಗ. ಅವರ ಜೊತೆ ನಾನು ಮಾತನಾಡಿದೆ, ಅವರು ಒಪ್ಪಲಿಲ್ಲವೆಂಬುದು ಬೇರೆ ವಿಷಯ. ಆದರೆ, ರೋಗಿಗಳಿಗೆ ಚಿಕಿತ್ಸೆ ಸಿಗಬೇಕಲ್ಲವೇ? ಹೆರಿಗೆ ಆಗುವವರಿಗೆ ಚಿಕಿತ್ಸೆ ಸಿಗಬೇಕಲ್ಲವೇ? ಯಾರಿಗೋ ಅಪಘಾತವಾಗಿರುತ್ತದೆ ಅವರಿಗೆ ತಕ್ಷಣ ಚಿಕಿತ್ಸೆ ಸಿಗಬೇಕಲ್ಲವೇ? ಹೆಣ ಇದ್ದರೆ ಅದನ್ನು post mortem ಮಾಡಿ ಕೊಡಬೇಕಲ್ಲವೆ? ಆದ್ದರಿಂದ, ಇದಕ್ಕೆ ಏನು ಪರ್ಯಾಯವಾಗಿ ಯೋಚನೆ ಮಾಡಿದ್ದೀರಿ? What is the alternative step that you have taken?

ಶ್ರೀ ಅರವಿಂದ್ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು alternative steps ಬಗ್ಗೆ ಗಮನ ಸೆಳೆದಿದ್ದಾರೆ. ನಮ್ಮ ಕಾನೂನಿನ ಅಡಿಯಲ್ಲಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಡಾಕ್ಟರ್ಸ್ ಮೇಲೆ ಆ ರೀತಿಯಾಗಿ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಇವತ್ತು ಅನೇಕ ಡಿಹೆಚ್ಓ ಗಳ ಹತ್ತಿರ ನಮ್ಮ ಅಧಿಕಾರಿಗಳು ಮಾತನಾಡಿದಾಗ ಅನೇಕ ಕಡೆ ಡಾಕ್ಟರ್‌ಗಳು ಕೇವಲ emergency service ಅಲ್ಲದೆ regular

service ಅನ್ನು ಕೂಡ ಕೆಲವು ಆಸ್ಪತ್ರೆಗಳಲ್ಲಿ ಮಾಡುತ್ತಿದ್ದಾರೆಂದು ತಿಳಿಸಿದ್ದಾರೆ. ಸಂಘಟನೆ ಮತ್ತು ಸಂಘದ ಹೆಸರಿನ ಮೂಲಕ ಇದನ್ನು ತಡೆಯುವಂಥ ಕೆಲಸವನ್ನು ಮಾಡುವಂಥ ಒಂದಿಷ್ಟು ಜನರ ಮೇಲೆ ಅನಿವಾರ್ಯವಾಗಿ ಕ್ರಮ ಜರುಗಿಸುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾರ ಸಿದ್ಧ ಇದೆ. ದಯವಿಟ್ಟು ಹೋರಾಟ ಕೈಬಿಟ್ಟು ಕೆಲಸಕ್ಕೆ ಹೋಗಿ ಎಂದು ಈ ಸದನದ ಮುಖಾಂತರ ಅವರಲ್ಲಿ ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಆ issue ಏನಿದೆ ಅದನ್ನು resolve ಮಾಡುವ ದೃಷ್ಟಿಯಿಂದ ಮಾಡೋಣ ನಿಮಗೆ ಏನು ಅನ್ಯಾಯವಾಗಿದೆಯೋ ಅಂದರೆ, ಪ್ರಮೋಷನ್ ಅಥವಾ ಮತ್ತೊಂದು ಕಾರಣಕ್ಕಾಗಿ ಜನರ ಆರೋಗ್ಯವನ್ನು ಹಾಳು ಮಾಡುವಂಥ ಕೆಲಸವನ್ನು ಮಾಡಬೇಡಿ ನಿಮ್ಮ ಸಮಸ್ಯೆಗೆ ಪರಿಹಾರವನ್ನು ಹುಡುಕುವಂಥ ಕೆಲಸವನ್ನು ನಾವು ಮಾಡುತ್ತೇವೆಂದು ಹೇಳಿದ್ದೇವೆ. ಅಕಸ್ಮಾತ್ ಅವರೇನಾದರು ಇದೇ ರೀತಿಯಾಗಿ ಮುಂದುವರಿದರೆ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಕ್ಕೆ ಸಿದ್ಧವಾಗಿದೆ.

ಶ್ರೀ ಸಿದ್ಧರಾಮಯ್ಯ :– ಪರ್ಯಾಯವಾಗಿ ಚಿಕಿತ್ಸೆ ಕುಡುವುದಕ್ಕೆ ಏನು ಮಾಡಿದ್ದೀರಿ?

ಅಧ್ಯಕ್ಷರು :– ಈ ವಿಷಯ ಮುಕ್ತಾಯವಾಗಿದೆ.

ಶ್ರೀ ಸಿದ್ಧರಾಮಯ್ಯ :– ಮಾನ್ಯ ಸಚಿವರೇ, ಪರ್ಯಾಯ ಚಿಕಿತ್ಸೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದಕ್ಕೆ ಏನು ಮಾಡಿದ್ದೀರಿ ಎಂಬ ಬಗ್ಗೆ ಹೇಳಿ ರೋಗಿಗಳು ಚಿಕಿತ್ಸೆ ಇಲ್ಲದೆ ಸಾಯಾಬೇಕೇ? ಬಡವರು ಚಿಕಿತ್ಸೆ ಪಡೆದುಕೊಳ್ಳುವುದಕ್ಕೆ ಎಲ್ಲಿಗೆ ಹೋಗಬೇಕು? ಇದರ ಬಗ್ಗೆ ತಾವು ಹೇಳಿ National Security Act ಪ್ರಕಾರ ಏನು ಕ್ರಮ ತೆಗೆದುಕೊಳ್ಳುತ್ತಿರೋ ಅದು ಬೇರೆ ಪ್ರಶ್ನೆ. ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿದ ತಕ್ಷಣ ರೋಗಿಗಳಿಗೆ ಚಿಕಿತ್ಸೆ ಸಿಗುವುದಿಲ್ಲ. That is a different aspect. ಆದರೆ, ಈಗ ಚಿಕಿತ್ಸೆ ಸಿಗುವುದಕ್ಕೆ ನೀವು ತೆಗೆದುಕೊಂಡಿರುವ ಪರ್ಯಾಯ ಕ್ರಮ ಏನು?

ಶ್ರೀ ಅರವಿಂದ್ ಲಿಂಬಾವಳಿ :– ಮಾನ್ಯ ಅಧ್ಯಕ್ಷರೆ, ಈ ರೀತಿಯಾದ ಘಟನೆ ಹಿಂದೆ ಆದಂತಹ ಸಂದರ್ಭದಲ್ಲಿ ನಮ್ಮ Contract Doctors ಅನ್ನು ಆಯುಷ್ ಡಾಕ್ಟರ್‌ಗಳನ್ನು ಸೇವೆಗೋಸ್ಕರ ಬಳಸಿಕೊಂಡಿದ್ದೆವು. ಆ

ರೀತಿಯಾದ ಒಂದು alternative arrangement ಅನ್ನು ಇಲಾಖೆಯಿಂದ ಸಿದ್ಧಪಡಿಸಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಈಗಾಗಲೇ ಬೀಗ ಹಾಕಿರುವ ಆಸ್ಪತ್ರೆಗಳ ಬಾಗಿಲನ್ನು ತೆಗೆಸಿ ಕಾಂಟ್ರ್ಯಾಕ್ಟ್ ಮತ್ತು ಆಯುಷ್ ಡಾಕ್ಟರ್‌ಗಳನ್ನು ಕಳುಹಿಸಬೇಕಾಗಿತ್ತು.

(ಗೊಂದಲ)

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ :– ಆಯುಷ್ ಡಾಕ್ಟರ್‌ಗಳನ್ನೂ ಸಹ ಹೋಗುವುದಕ್ಕೆ ಬಿಡುತ್ತಿಲ್ಲ. ಆಸ್ಪತ್ರೆಗಳ ಬಾಗಿಲನ್ನು ಹಾಕಿದ್ದಾರೆ. ದಯವಿಟ್ಟು ತಾವು ಹೋಗಿ ನೋಡಿ.

ಶ್ರೀ ಅರವಿಂದ್ ಲಿಂಬಾವಳಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಲಹೆ ಕೊಟ್ಟಂಥ ರೀತಿಯಲ್ಲಿ ನಾವು ಈಗಾಗಲೇ ಕ್ರಮ ಜರುಗಿಸಿದ್ದೇವೆ. ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಇರುವಂಥ ಡಾಕ್ಟರ್‌ಗಳು ಆಸ್ಪತ್ರೆಗಳಿಗೆ ಹೋಗಿ ಡ್ಯೂಟಿಗೆ ರಿಪೋರ್ಟ್ ಮಾಡಿಕೊಂಡಿದ್ದಾರೆ. ಎಲ್ಲೆಲ್ಲಿ ಈ ರೀತಿಯಾದ ಸಮಸ್ಯೆಗಳು ಆಗುತ್ತೆವೆಯೋ ಅಂಥ ಕಡೆ contract doctors ಮತ್ತು ಆಯುಷ್ ಡಾಕ್ಟರ್ಸ್‌ನ್ನು ನಾವು ಬಳಸಿಕೊಂಡು ಈ ಕೆಲಸವನ್ನು ಮುಂದುವರಿಸುತ್ತೇವೆ. ಇಷ್ಟೇ ಅಲ್ಲದೆ, ಯಾರು ಕೆಲಸಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆಯೋ ಅಂಥವರ ಮೇಲೆ ಶಿಸ್ತಿನ ಕ್ರಮ ಜರುಗಿಸಿ ಎಂದು ಈಗಾಗಲೇ ಡಿ.ಸಿ. ಮತ್ತು ಡಿಹೆಚ್‌ಓ ಗಳಿಗೆ instruction ಕೊಟ್ಟಿದ್ದೇವೆ.

ಶ್ರೀ ಎನ್.ಸಂಪಂಗಿ :– ಮಾನ್ಯ ಸಚಿವರೇ, ಇದು ನಿಮ್ಮ ಕೈಯಲ್ಲಿ ಸಾಧ್ಯವೇ ಇಲ್ಲ?

ಶ್ರೀ ಅರವಿಂದ್ ಲಿಂಬಾವಳಿ :– ಏಕೆ?

ಶ್ರೀ ಎನ್.ಸಂಪಂಗಿ :– ಏಕೆಂದರೆ, ನೀವೆಲ್ಲರೂ ಈ ಸದನದಲ್ಲಿ ಸುಳ್ಳು ಭರವಸೆಗಳನ್ನು ಕೊಡುತ್ತೀರಿ. ಎಲ್ಲವನ್ನೂ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಇವತ್ತಿನದಿವಸ ರೋಗಿಗಳ ಪರದಾಟವನ್ನು ನೀವು ಯಾವತ್ತೂ ಕೂಡ solve ಮಾಡುವುದಕ್ಕೆ ಆಗುವುದಿಲ್ಲ. ತಾವು ಇಲ್ಲಿ ಕೇವಲ ಸುಳ್ಳು ಅಭಿಪ್ರಾಯ ಮತ್ತು ಸುಳ್ಳು ಆಶ್ವಾಸನೆಗಳನ್ನು ಕೊಡುತ್ತಿದ್ದೀರಿ.

ಶ್ರೀ ಅರವಿಂದ್ ಲಿಂಬಾವಳಿ :– ಅದು ನಿಮ್ಮ ಅಭಿಪ್ರಾಯ ಇರಲಿ, ಅದನ್ನು ನೀವೇ ಇಟ್ಟುಕೊಳ್ಳಿ ಪರವಾಗಿಲ್ಲ.

ಶ್ರೀ ಎನ್.ಸಂಪಂಗಿ :– ಅಭಿಪ್ರಾಯವಲ್ಲ. ನೀವೊಬ್ಬ ಜವಾಬ್ದಾರಿ ಮಂತ್ರಿಯಾಗಿ ಬೇಜವಾಬ್ದಾರಿ ಉತ್ತರ ಕೊಡತಕ್ಕಂಥ ಮಂತ್ರಿ ನಮಗೆ ಬೇಕಾಗಿಲ್ಲ.

ಶ್ರೀ ಅರವಿಂದ್ ಲಿಂಬಾವಳಿ :– ಆಯುಷ್ ಡಾಕ್ಟರ್ಸ್ ಮತ್ತು contract doctors ಈ ಒಂದು ಹೋರಾಟದಲ್ಲಿ ಭಾಗವಹಿಸುತ್ತಿಲ್ಲ. ಆದ್ದರಿಂದ, ಅವರುಗಳ ಸೇವೆ ಅಲ್ಲಿ ಮುಂದುವರಿಯುತ್ತಿದೆ.

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ :– ಅವರ್ಯಾರೂ ಆಸ್ಪತ್ರೆಯಲ್ಲಿ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಆಸ್ಪತ್ರೆಗಳಿಗೆ ಬೀಗ ಹಾಕಿದ್ದಾರೆ. ಆದ್ದರಿಂದ, ಅಲ್ಲಿ ಯೂರೂ ಹೋಗಿಲ್ಲ. ಯಾವ್ಯಾವ ಆಸ್ಪತ್ರೆಯಲ್ಲಿ ಎಷ್ಟೆಷ್ಟು ಡಾಕ್ಟರ್‌ಗಳನ್ನು ಹಾಕಿದ್ದೇವೆಂಬ ಬಗ್ಗೆ ಡೀಟೇಲ್ಸ್ ಕೊಡಿ.

(ಗೊಂದಲ)

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ :– ಆಯುಷ್ ಡಾಕ್ಟರ್‌ಗಳು ಯಾವುದೆ ಆಸ್ಪತ್ರೆಗೆ ಹೋಗಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ :– ಆಸ್ಪತ್ರೆಗಳಿಗೆ ಬೀಗ ಹಾಕಿದ್ದಾರೆ. ಆಸ್ಪತ್ರೆಯೊಳಕ್ಕೆ ಹೋಗುವುದಕ್ಕೆ ಬಿಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಈ ರೀತಿಯಾಗಿ ಎಲ್ಲರೂ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ :– This is a very serious problem.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರಾದರೂ ಮಾತನಾಡಿ. ಈ ರೀತಿಯಾಗಿ ಎಲ್ಲರೂ ನಿಂತುಕೊಂಡು ಮಾತನಾಡಿದರೆ problem. solve ಆಗುತ್ತದೆಯೇ?

(ಗೊಂದಲ)

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಸರಿಯಾಗಿ ಉತ್ತರ ಕೊಟ್ಟರೆ ನಾವೇಕೆ ಕೇಳುತ್ತೇವೆ?

ಶ್ರೀ ಸಿದ್ದರಾಮಯ್ಯ :- ಇದು ಮನುಷ್ಯತ್ವದ ಪ್ರಶ್ನೆಯಾಗಿದೆ. ಚಿಕಿತ್ಸೆ ಇಲ್ಲದೆ ರೋಗಿಗಳು ಸಾಯುತ್ತಿದ್ದಾರೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ :- ಚಿಕಿತ್ಸೆ ಇಲ್ಲದೆ ಜನರು ಸತ್ತು ಹೋದರೆ ಪರಿಹಾರ ಕೊಡುವವರು ಯಾರು?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :- ಕ್ಯಾಬಿನೆಟ್ ಸಬ್ ಕಮಿಟಿ ಒಂದು ವಾರದೊಳಗೆ ಸಭೆ ಸೇರಿ ಎಲ್ಲವನ್ನೂ ಸರಿಪಡಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಒಂದು ವಾರ ಸುಮ್ಮನಿದ್ದರೆ ಆಗುವುದಿಲ್ಲ. ಒಂದೆರಡು ದಿನದಲ್ಲಿ ಸಭೆ ಸೇರಿ solve ಮಾಡುತ್ತೇವೆಂದು ಹೇಳಲಿ.

ಶ್ರೀ ಸಿದ್ದರಾಮಯ್ಯ :- ಈ ರೀತಿಯಾಗಿ ಕೈಕಟ್ಟಿಕೊಂಡು ಕುಳಿತರೆ ಹೇಗೆ? Government helpless ಆದರೆ ಹೇಗೆ? ಇದೆಲ್ಲವನ್ನೂ ನಾವು ಒಪ್ಪಿಕೊಳ್ಳವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎನ್.ಸಂಪಂಗಿ :- ಅಲ್ಲಿದ್ದ ರೋಗಿಗಳಿಗೆ ಊಟ ಕೊಡುವುದಕ್ಕೆ ಇವರ ಕೈಯಿಂದ ಆಗಲಿಲ್ಲ

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಅರವಿಂದ್ ಲಿಂಬಾವಳಿ :- ಮಾನ್ಯ ಅಧ್ಯಕ್ಷರೆ, ನನ್ನ ಸ್ಟೇಟ್‌ಮೆಂಟ್ ಅನ್ನು ಪೂರ್ಣವಾಗಿ ಇನ್ನೂ ಮುಗಿಸಿಲ್ಲ. ಆಯುಷ್ ಡಾಕ್ಟರ್ಸ್ ಸ್ಟ್ರೈಕ್‌ಗೆ ಹೋಗಿಲ್ಲ. ಆನಂತರ contract doctors ಸಹ strike ಗೆ ಹೊಗಿಲ್ಲ.

ಶ್ರೀ ಸಿದ್ದರಾಮಯ್ಯ :- ಎಷ್ಟು ಜನ ಡಾಕ್ಟರ್ಸ್ ಇದ್ದಾರೆ ಹೇಳಿ?

ಶ್ರೀ ಅರವಿಂದ್ ಲಿಂಬಾವಳಿ :- ನಾನು ಪೂರ್ತಿಯಾಗಿ ಮಾತನಾಡಿ ಮುಗಿಸುತ್ತೇನೆ. ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ :– ಎಷ್ಟು ಜನ ಇದ್ದಾರೆಂದು ಹೇಳಿ? ಆಯುಷ್ ಮತ್ತು contract doctors ಎಷ್ಟು ಜನ ಇದ್ದಾರೆಂದು ಮತ್ತೆ ಎಲ್ಲಾ ಆಸ್ಪತ್ರೆಗಳಿಗೆ ಕಳುಹಿಸಿಕೊಟ್ಟಿದ್ದೀರಾ? ಇದನ್ನು ಮೊದಲು ಹೇಳಬೇಕಲ್ಲವೇ?

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ :– ಆ ಡಾಕ್ಟರ್‌ಗಳನ್ನು ಆಸ್ಪತ್ರೆಗೆ ಹೋಗುವುದಕ್ಕೆ ಇವರುಗಳು ಬಿಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಅರವಿಂದ್ ಲಿಂಬಾವಳಿ :– ಅಲ್ಲಿ ಖಾಸಗಿಯಾಗಿ ಯಾರು practice ಮಾಡುತ್ತಿದ್ದಾರೆಯೋ ಅವರನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಿ ಎಂದು ನಮ್ಮ ಡಿಹೆಚ್‌ಒ ಮತ್ತು ಡಿ.ಸಿ.ಗಳಿಗೆ instruction ಕೊಟ್ಟಿದ್ದೇವೆ. ..

(ಗೊಂದಲ)

ಅಧ್ಯಕ್ಷರು : ಉತ್ತರ ಹೇಳುವುದಕ್ಕೆ ಅವರಿಗೆ ಬಿಡದಿದ್ದರೆ ಹೇಗೆ?

ಶ್ರೀ ಅರವಿಂದ್ ಲಿಂಬಾವಳಿ :– ವಾಹನ 108ರ ಸಿಬ್ಬಂದಿಗಳೂ ಸಹ strike ಗೆ ಹೋಗಿಲ್ಲ. ನನಗೆ ಈಗ ವರದಿ ಬಂದಿರುವ ಪ್ರಕಾರ ನಮ್ಮ ಬೇಡಿಕೆ ಏನು ಇತ್ತೋ ಅದನ್ನು ಈಡೇರಿಸಿದ್ದಾರೆ. ಆದ್ದರಿಂದ, ನಾವು ಮುಷ್ಕರವನ್ನು ಮುಂದುವರಿಸುವುದಿಲ್ಲವೆಂದು ಅಲ್ಲಿರುವ ಪ್ಯಾರಾಮೆಡಿಕಲ್–ನವರು ಹೇಳಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ alternative arrangement ಅನ್ನು ನಾವು ಮಾಡಿದ್ದೇವೆಂದು ಮಾನ್ಯ ವಿರೋಧ ಪಕ್ಷದ ನಾಯಕ ಗಮನಕ್ಕೆ ತರುತ್ತೇನೆ. ಈಗ crises ಆಗಿದೆ, ಇಲ್ಲವೆಂದು ನಾನು ಹೇಳುತ್ತಿಲ್ಲ. ಆಗಿರುವ crises ಅನ್ನು ನಾವು ಮ್ಯಾನೇಜ್ ಮಾಡುತ್ತಿದ್ದೇವೆ. ಈ ಸದನದ ಮುಖಾಂತರ ಮತ್ತೊಂದು ಸಾರಿ ಅವರಲ್ಲಿ ತಾವೂ ಸಹ ವಿನಂತಿ ಮಾಡಿಕೊಳ್ಳಿ ಎಂದು ಹೇಳುತ್ತೇನೆ. ಡಾಕ್ಟರ್ಸ್‌ಗಳು ವಾಪಸ್ಸು ಕೆಲಸಕ್ಕೆ ಹೋಗಲೆಂಬುದು ನನ್ನ ಅಭಿಪ್ರಾಯವಾಗಿದೆ.

(ಗೊಂದಲ)

ಅಧ್ಯಕ್ಷರು : ಈ ವಿಷಯ ಮುಕ್ತಾಯವಗಿದೆ. ಇದರ ಮೇಲಿನ ಚರ್ಚೆನ ಸಾಕು.

(ಗೊಂದಲ)

ಅಧ್ಯಕ್ಷರು : ಮತ್ತೆ ಚರ್ಚೆಗೆ ಅವಾಕಾಶ ಇಲ್ಲ. ದಯವಿಟ್ಟು ಎಲ್ಲರು ಕುಳಿತುಕೊಳ್ಳಿ. ಯಾವುದೂ ಸಹ ದಾಖಲೆಗೆ ಹೋಗುವುದಿಲ್ಲ.

(ಮಾನ್ಯ ಅಧ್ಯಕ್ಷರ ಅಪ್ಪಣೆಯಂತೆ ಈ ಹಂತದಲ್ಲಿ ದಾಖಲು ಮಾಡಿಕೊಂಡಿಲ್ಲ)

ಅಧ್ಯಕ್ಷರು :– ಈ ವಿಷಯ ಮುಕ್ತಾಯವಾಗಿದೆ. ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದಾರೆ. ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದರೆ ಸರಿಯಾಗುವುದಿಲ್ಲ. ದಯವಿಟ್ಟು ಮತ್ತೆ ಮತ್ತೆ ಅದನ್ನೇ ಹೇಳಬೇಡಿ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, alternative arrangement ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, alternative arrangement ಆಗದೆ ಯಾರಾದಾರೂ ಸತ್ತರೆ ಅವರ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ? ಇದನ್ನು ಅವರು ಹೇಳಬೇಕು? ..

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಸರಿಯಾಗಿ ಹೇಳಿದ್ದಾರೆ. ಆದ್ದರಿಂದ, ಮತ್ತೆ ಮತ್ತೆ ಅದನ್ನು ಪ್ರಸ್ತಾಪ ಮಾಡುವುದು ಬೇಡ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಸಚಿವರು ಹೇಳಿರುವ ಉತ್ತರ ಸರಿ ಇಲ್ಲ. ಆಯುಷ್ ಡಾಕ್ಟರ್‌ಗಳು emergency cases ಅನ್ನು ಅಟೆಂಡ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಮುಂದೆ ಯಾರಾದರೂ ಸತ್ತರೆ ಯಾರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ?

(ಗೊಂದಲ)

ಅಧ್ಯಕ್ಷರು : ಮುಂದಿನ ವಿಷಯ ಮಾತನಾಡುವುದಕ್ಕೆ ಮಾನ್ಯ ಮಹದೇವ ಪ್ರಸಾದ್‌ರವರನ್ನು ಕರೆದಿದ್ದೇನೆ. ಮಾನ್ಯ ಮಹದೇವ ಪ್ರಸಾದ್‌ರವರೆ ತಾವು ಕೇಳಿ?

2. ವಿಷಯ :– 100 ಅಂಕಗಳಿಗೆ ಕನ್ನಡ ಭಾಷೆಯನ್ನು ಕಲಿಸುವುದಕ್ಕೆ ಅವಕಾಶ ಮಾಡಿದ್ದನ್ನು ಕಡಿತಗೊಳಿಸಿ ಕೇವಲ 50 ಅಂಕಗಳಿಗೆ ಇಳಿಸಿರುವ ಸರ್ಕಾರಿ ಆದೇಶವನ್ನು ವಾಪಸ್ಸು ಪಡೆದುಕೊಳ್ಳುವ ಬಗ್ಗೆ.